ನೀರಿನಿಂದ ಹೊರಬಂದ ಎಸ್ಟೆಲ್ಲಾ ಮತ್ತು ಮಿಮಿ ತಮ್ಮ ತಮ್ಮ ಮುಖಗವಚಗಳನ್ನು ಹಾಗೂ ವಾಯುಕೊಳವೆಗಳನ್ನು ತೆಗೆದಿಟ್ಟರು.

ಹಸಿಗೂದಲಿನ ನೀರು ಬಸಿದು ತಲೆ ಜಾಡಿಸಿದ ಮಿಮಿ, "ಈ ಡೈವಿಂಗ್ ಸಾಧನ ಈಗ ಮಾತ್ರ ಭಾರ ಅನಿಸುತ್ತದೆ, ನೀರಿನಲ್ಲಿದ್ದಾಗ ಹಗುರೋ ಹಗುರು, ಮೀನಿನಷ್ಟು ಸುಲಭವಾಗಿ ಈಜಬಹುದು" ಎಂದು ಅಭಿಪ್ರಾಯಪಟ್ಟಳು.

"ಅದೆಲ್ಲಾ ಸರಿ, ಆದರೆ ನಾವು ಅಲ್ಲಿ ನೋಡಿದ್ದು ಏನು?" – ಎಸ್ಟೆಲ್ಲಾ ದಿಗಿಲುಗೊಂಡು ಕೇಳಿದಳು.

"ಯಾರೋ ಮನುಷ್ಯ ಇರಬಹುದು."

"ಆಕಾರ ಮನುಷ್ಯನದು, ಆದರೆ ಒಂದು ಸಂಗತಿ ಗಮನಿಸಿದೆಯಾ?"

"ಅದೇನು?"

"ನಮ್ಮನ್ನು ನೋಡಿ ಆತ ದೂರ ಹೋದ."

"ಅದಕ್ಕೇನು?"

"ಅವನ ಬಳಿ ವಾಯುಕೊಳವೆಗಳಿರಲಿಲ್ಲ. ನೀರಿನ ಮೇಲ್ಮೈ ಕಡೆ ಹೋಗದೆ ಆ ಗವಿಯ ಒಳಗೇ ಹೋಗಿಬಿಟ್ಟ!"

"ಹೌದಾ? ಯಾವುದಾದರೊಂದು ಪ್ರಾಣಿ ಇರಬಹುದು, ವಿಲ್ಲೀಯನ್ನು ಕೇಳಿ ತಿಳಿದುಕೊಳ್ಳಬಹುದು."

"ಬೇಡ, ಬೇಡ. ಸ್ಕೂಲ್ ನಿಯಮಾವಳಿಗಳನ್ನು ಗಿಳಿಗೆ ಹೇಳುವ ಹಾಗೆ ಹೇಳಿ ಬಾಯಿಪಾಠ ಮಾಡಿಸಿದ್ದಾನೆ!"

"ಇಪ್ಪತ್ತು ಮೀಟರುಗಳಿಗಿಂತ ಹೆಚ್ಚು ಆಳಕ್ಕೆ ಇಳಿಯಬಾರದು, ಲೈಫ್ ಲೈನ್ ಬಿಟ್ಟು ಹೋಗಬಾರದು; ಎಮರ್ಜೆನ್ಸಿ ಇದ್ದರೆ ಲೈಫ್ ಲೈನನ್ನು ಮೂರು ಸಲ ಜೋರಾಗಿ ಜಗ್ಗಬೇಕು" ಎಂದು ಇಬ್ಬರೂ ಕೂಡಿಯೇ ವಿಲ್ಲೀಯನ್ನು ಗೇಲಿ ಮಾಡುತ್ತ ನುಡಿದು ಕಿಸಿಕಿಸಿ ನಕ್ಕರು.

"ವಿಲ್ಲಿ ತನ್ನ ಕೆಲಸದ ಬಗ್ಗೆ ತುಂಬಾ ಗಂಭೀರ, ಇಡೀ ಜಗತ್ತಿನ ಜವಾಬ್ದಾರಿ ಹೊತ್ತವರಂತಿರುತ್ತಾನೆ. ಈ ಪ್ರದೇಶಕ್ಕೆಲ್ಲ ಅವನೇ ಬಾಸ್. ಡೈವಿಂಗ್ ಕಲಿಯಲಿಕ್ಕೆ ದೂರದೂರದಿಂದ ಬರುತ್ತಾರೆ. ನಾವೇ ಬಂದಿದ್ದೀವಲ್ಲಾ ಆಸ್ಟ್ರೇಲಿಯಾದಿಂದ! ಕಳಂಕರಹಿತ ವ್ಯಕ್ತಿ; ಇದುವರೆಗೆ ಎಂತಹದೂ ಅವಗಢ ಸಂಭವಿಸದಂತೆ ಜಾಗರೂಕನಾಗಿದ್ದಾನೆ' ಎಂದು ಹೊಗಳಿದಳು ಎಸ್ಟೆಲ್ಲಾ.

ಸಮಯದ ಅರಿವಾಗಿ ಮಿಮಿ, "ಆಯ್ತಲ್ಲಾ ಟೈಂ, ನಡೆ ಹೋಗೋಣ ಬ್ರೇಕ್‌ಫಾಸ್ಟಿಗೆ. ಅಂದ ಹಾಗೆ ಈವತ್ತು ನೋಡಿದ್ದನ್ನು ಅವನಿಗೆ ಹೇಳೋದೇಬೇಡ. ಹೇಳಿದರೆ ನಾವು ಈವತ್ತೇ ಹೊಸದಾಗಿ ಬಂದಿದ್ದೇವೆ ಅನ್ನೋ ತರಹ ತಾಕೀತು ಮಾಡ್ತಾನೆ. ಆಮೇಲೆ ನಾವು ಲೈಫ್ ಲೈನ್ ಬಿಟ್ಟು ಒಂದಿಂಚೂ ಸರಿಯುವಂತಿಲ್ಲ" ಎಂದು ನಗುತ್ತ ಹೇಳಿದಳು. ಇಬ್ಬರೂ ಹೊರಟರು ಬ್ರೇಕ್‌ಫಾಸ್ಟಿಗೆ.

ಮರುದಿವಸ ರೂಢಿಯಂತೆ ಲೈಫ್ ಗಾರ್ಡಿಗೆ ಹೇಳಿ ನೀರಿಗೆ ಇಳಿದರು. ಅವರು ಕೂಡ ರೂಢಿಯಂತೆ ಗೋಣುಹಾಕಿ ತಮ್ಮ ಕೆಲಸದಲ್ಲಿ ತೊಡಗಿದರು.

ಎಸ್ಟೆಲ್ಲಾಗೆ ಆ ಗುಹೆ ಕುತೂಹಲ ಹುಟ್ಟಿಸಿತ್ತು. "ಈವತ್ತು ಕೂಡಾ ಆ ಗುಹೆಯ ಕಡೆ ಹೋಗೋಣ" ಅಂದಳು. ಮಿಮಿ ಸಮ್ಮತಿಸಲಿಲ್ಲ. "ಅಕಸ್ಮಾತ್ ತಿರುಗಿ ಬರುವ ದಾರಿ